| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 223/2017**

**ಪಿ.ಡಬ್ಲ್ಯು : 8 ಸಿ.ಡಬ್ಲ್ಯು : 4**

ಸಾಕ್ಷಿದಾರನ ಹೆಸರು : ಮೊಹಮ್ಮದ್ ಇಲಿಯಾಸ್
ತಂದೆಯ ಹೆಸರು : ಎಂ ಇಸ್ಮಾಯಿಲ್
ಪ್ರಾಯ : 42 ವರ್ಷ
ಉದ್ಯೋಗ : ರಿಕ್ಷಾ ಚಾಲಕ
ವಾಸ : ಮುಂಡ್ಕೂರು

ದಿನಾಂಕ 27.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಸಾಕ್ಷಿಗೆ ವಿಸಿ ಮುಖಾಂತರ ಆರೋಪಿಯನ್ನು ತೋರಿಸಿದ್ದು ನೋಡಿ ಗುರುತಿಸಿರುತ್ತಾರೆ.

ಸುಮಾರು 2-3 ವರ್ಷಗಳ ಹಿಂದೆ ಮಾರಿಗುಡಿಯಿಂದ ಮುಂಡ್ಕೂರಿಗೆ ಬರುತ್ತಿರುವಾಗ ನಮ್ಮ ಮನೆಯ ಎದುರುಗಡೆ ಹಾಲಿನ ಡೈರಿಯ ಹತ್ತಿರ ಪೊಲಿಸರು ಆರೋಪಿಯನ್ನು ತೋರಿಸಿ ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ಸಾಕ್ಷಿಯು ದಿನಾಂಕ 05.12.2016 ರಂದು 2 ತಕ್ಷೀರು ಸ್ಥಳದ ಮಹಜರಿನಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ತಕ್ಷೀರು ಸ್ಥಳದ ಮಹಜರುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಗಳನ್ನು ನಿಪಿ-2(ಸಿ) ಮತ್ತು 3(ಸಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮದಲ್ಲಿ ಯಾವುದೇ ಸ್ಥಳ ಮಹಜರು ಮಾಡಿರುವುದಿಲ್ಲ ಮತ್ತು ಯಾವುದೇ ಸೊತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಪೊಲೀಸರಿಗೆ ಯಾವುದೆ ಮರುಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> ಃ <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

2. ದಿನಾಂಕ 11.12.2016 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ04.12.2016 ರಂದು ರಾತ್ರಿಯ ಸಮಯ ನನ್ನ ಪರಿಚಯದ ಸುರೇಶ್ ಜೋಗಿ ಎನ್ನುವವರ ಮನೆಯಲ್ಲಿ ಯಾರೊ ಮನೆಯ ಎದುರಿನ ಬಾಗಿಲಿನ ಬೀಗ ಮುರಿದು ಮನೆಯ ಒಳಗೆ ಪ್ರವೇಶಿಸಿ ಮನೆಯ ಒಳಗಿನ ಕಾಪಾಟು ಹಾಗೂ ಕೋಣೆಯ ಒಳಗೆ ಹುಡುಕಾಡಿ ಕಳುವು ಮಾಡಲು ಪ್ರಯತ್ನಿಸಿರುತ್ತಾರೆ ಅಲ್ಲದೆ ಅದೇ ಮನೆಯ ಪಕ್ಕದ ರತಿ ಶೆಡ್ತಿಯವರ ಮನೆಯಲ್ಲಿಯೂ ಮನೆಯ ಎದುರಿನ ಬಾಗಿಲಿನ ಬೀಗ ಮುರಿದು ಅದೇ ದಿನ ರಾತ್ರಿ ಯಾರೊ ಕಳ್ಳರು ಮನೆಯ ಒಳಗೆ ಪ್ರವೇಶಿಸಿ ಕಾಪಾಟಿನ ಬಾಗಿಲು ಮುರಿದು ಕಳುವು ಮಾಡಲು ಪ್ರಯತ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> ಃ ಆರೋಪಿ ಪರ ಃ ಶ್ರೀ ಕೆ ಬಿ ಎಸ್ ವಕೀಲರಿಂದ ಃ

ಬೆಳಗ್ಗಿನ ಅವಧಿ ಮುಗಿದಿದ್ದು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ